## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 70 ಗ್ರಾನೀಸ (8)2015

2ನೇ ಮಹಡಿ, 'E' Block,
K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:21.01.2016

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಅತ್ಯಂತ ಜರೂರು**

ಇವರಿಗೆ:
ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ: 2015-16ನೇ ಸಾಲಿನಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸಲು ಅನುಷ್ಠಾನ ಸಂಸ್ಥೆ / ಏಜೆನ್ಸಿಯವರೊಂದಿಗೆ ಕರಾರು ಪತ್ರ ಮಾಡಿಕೊಳ್ಳುವುದರ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 50 ಗ್ರಾನೀಸ(8)2015, ದಿನಾಂಕ:19.12.2015
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 50 ಗ್ರಾನೀಸ(8)2015, ದಿನಾಂಕ:28.12.2015
3. ಸರ್ಕಾರದ ಪತ್ರ ಸಂಖ್ಯೆ: RDP/143/RDW&SD/2015, ದಿನಾಂಕ:07.01.2016
4. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 03 ಗ್ರಾನೀಸ(8)2016, ದಿನಾಂಕ:13.01.2016

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ 2015-16ನೇ ಸಾಲಿನಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸುವ ಕುರಿತು ವಹಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿತ್ತು. ಮುಂದುವರೆದು, ಉಲ್ಲೇಖ(2&3)ರ ಸರ್ಕಾರದ ಪತ್ರದೊಂದಿಗೆ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಅನುಷ್ಠಾನ ಸಂಸ್ಥೆ / ಏಜೆನ್ಸಿಯವರೊಂದಿಗೆ ಕರಾರು ಪತ್ರಗಳನ್ನು ಮಾಡಿಕೊಳ್ಳಲು ಕಾನೂನು, ಸಂಸದೀಯ ವ್ಯವಹಾರಗಳ ಇಲಾಖೆಯಿಂದ ಪರಿಶೀಲನೆಗೊಳಪಡಿಸಿ ಅಂತಿಮಗೊಳಿಸಿದ ಕರಡು ಕರಾರು ಪತ್ರದ ಮಾದರಿಯನ್ನು ಅಡಕವಿರಿಸಿ ಮುಂದಿನ ಅಗತ್ಯ ಕ್ರಮವಹಿಸಲು ಸೂಚಿಸಲಾಗಿತ್ತು.

ಕೆಲವು ಜಿಲ್ಲಾ ಪಂಚಾಯಿತಿಗಳಿಂದ ಕರಡು ಕರಾರು ಪತ್ರದಲ್ಲಿನ ಅಂಶಗಳ ಕುರಿತು ಸ್ಪಷ್ಟೀಕರಣ ಕೋರಿದ್ದರಿಂದ, ಉಲ್ಲೇಖ(4)ರ ಸರ್ಕಾರದ ಪತ್ರದಲ್ಲಿ ಕರಡು ಕರಾರು ಪತ್ರದಲ್ಲಿನ ಅಂಶಗಳ ಕುರಿತು ಸ್ಪಷ್ಟೀಕರಣವನ್ನು ಸಹ ನೀಡಲಾಗಿರುತ್ತದೆ. ಸದರಿ ಕರಡು ಕರಾರು ಪತ್ರದಲ್ಲಿ ಉಲ್ಲೇಖಿತ ಸರ್ಕಾರಿ ಪತ್ರಗಳಲ್ಲಿ ಸೂಚಿತ ಬದಲಾವಣೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಅಂಶಗಳನ್ನು ಸೇರಿಸುವುದಾಗಲಿ / ತೆಗೆದು ಹಾಕುವುದಾಗಲಿ ಮಾಡುವಂತಿಲ್ಲ. ಇನ್ನೂ ವಿಳಂಬ ಮಾಡದೇ ಕೂಡಲೇ ಸಂಬಂಧಿಸಿದ ಅನುಷ್ಠಾನ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸೂಚಿಸಿದೆ.

ಶುದ್ಧ ನೀರಿನ ಘಟಕಗಳನ್ನು ಅಳವಡಿಸುವ ಸಲುವಾಗಿ ಆಯಾ ಗ್ರಾಮಗಳಲ್ಲಿ ಈಗಾಗಲೇ ನಿವೇಶನಗಳನ್ನು ಗುರುತಿಸಿ, ನಿವೇಶನದ ನಕ್ಷೆಯನ್ನು ಚಕ್ಕುಬಂದಿ ಸಮೇತ ತಯಾರಿಸಿ ಕಳುಹಿಸಿಕೊಡುವುದಲ್ಲದೇ, ಸದರಿ ನಿವೇಶನವನ್ನು ಅಡಮಾನ / ಪರಬಾರೆಯನ್ನಾಗಲಿ ಮಾಡಲು ಅವಕಾಶವಿರುವುದಿಲ್ಲ. ಇದನ್ನು ನಿವೇಶನ ನಕ್ಷೆಯಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿಯ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಧೃಢೀಕರಿಸಿ ಆಯಾ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರು ಶುದ್ಧೀಕರಣ ಘಟಕ ಅಳವಡಿಸಲು ನಿಗಧಿಯಾದ ಸಂಸ್ಥೆಗಳಿಗೆ ಕೂಡಲೇ ನೀಡಲು ಕ್ರಮ ಜರುಗಿಸತಕ್ಕದ್ದು.

ವರ್ಷಾಂತ್ಯ ಸಮೀಪಿಸುತ್ತಿದ್ದು, ನಿಗಧಿತ ಗುರಿ ಸಾಧಿಸಲು ಕಾಲಾವಕಾಶ ಕಡಿಮೆಯಾಗುತ್ತಿದ್ದು, ಯುದ್ಧೋಪಾದಿಯಲ್ಲಿ ಕಾರ್ಯ ಪ್ರವೃತ್ತರಾಗಲು ಸೂಚಿಸಿದೆ.

ತಮ್ಮ ವಿಶ್ವಾಸಿ,

(ಸುಭಾಷ್ ಚಂದ್ರ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಯನ್ನು:**

1. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, 'E' Block, K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09 ರವರ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ (4) ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ ಇಲಾಖೆ ವೃತ್ತಗಳು- ಇವರಿಗೆ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ (30) ಕಾರ್ಯಪಾಲಕ ಇಂಜಿನಿಯರ್‌ಗಳು, ಗ್ರಾ.ಕು.ನೀ & ನೈ ಇಲಾಖೆ ವಿಭಾಗಗಳು- ಇವರಿಗೆ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ.
4. SCOTMAS Limited, No-422, 3rd Main, HMT Layout, Ananda Nagara, Bengaluru – 560032.
5. Dowac Systems & Projects India Private Limited, 15/9, 2nd Floor, Primrose Road, M.G.Road Cross, Bengluru – 560001.